**ಕರವಾಚೌಥ್**‌ನಲ್ಲಿ ಸುಗಂಧಾ ಭಾಗವಹಿಸಿ ಬಂದ ಬಳಿಕ, 'ಅದು ಸರಿ, ಸುಗಂಧಾ! ಆದ್ರೆ ನೀನು ಹೀಗೆಲ್ಲಾ ಮಾಡಿ ದುರ್ಬಲಳಾಗುತ್ತಿ ಅಲ್ಲವೇ? ನೀನು ಪರಂಪರಾಗತ ಪತ್ನಿಯಂತೆ ಜೀವನ ಸಾಗಿಸಲು ಬಯಸುವುದಿಲ್ಲವೆಂದು ನೀನೇ ಹೇಳಿದ್ದೆ. ಹೀಗಿರುವಾಗ ಇದೆಲ್ಲಾ ಏನು? ನೀನು ಸಹ ಉಪವಾಸ ವ್ರತವನ್ನು ಮಾಡಿದ್ದೆಯಾ?' ರಿತಿಕ್ ಆಶ್ಚರ್ಯವನ್ನು ವ್ಯಕ್ತಪಡಿಸಿದ. ಹೀಗಾಗುವುದೆಂದು ನನಗೆ ಗೊತ್ತಿತ್ತು.

'ಓಹ್ ನೋ! ಸುಮ್ಮೆ ಎಂಜಾಯ್ ಮಾಡೋದಕ್ಕಾಗಿ; ನಾನೊಂದು ಥಿಯೇಟರ್ ಪ್ಲೇನಲ್ಲಿ ಭಾಗವಹಿಸುತ್ತಿದ್ದೆ ಎಂದು ತಿಳಿ', ನಾನು ರಿತಿಕ್‌ಗೆ ಮತ್ತು ಅದಕ್ಕಿಂತ ನನಗೇ ನಾನು ತಿಳಿಯಪಡಿಸಿಕೊಳ್ಳುತ್ತಾ ಹೇಳಿದೆ.

'ವೆಲ್, ಮತ್ತೆಂದೂ ಇಂಥ ಜಂಜಾಟದಲ್ಲಿ ಬೀಳಬೇಡ'.


'ನೆವರ್', ನಾನು ಅವನಿಗೆ ಭರವಸೆಯನ್ನು ಕೊಟ್ಟೆ, ನನಗೂ ಭರವಸೆಯನ್ನು ಕೊಟ್ಟುಕೊಂಡೆ. ಆದರೂ ಮನಸ್ಸಿನಲ್ಲಿ ಮತ್ತೊಮ್ಮೆ ರಿತಿಕ್‌ನ ದೀರ್ಘಾಯುಸ್ಸಿಗೆ ದೇವರಲ್ಲಿ ಪ್ರಾರ್ಥಿಸಿದೆ.

ಅಮ್ಮ ಸಾಮಾನ್ಯವಾಗಿ ಫೋನ್ ಮಾಡಿ ನನ್ನ ಆರೋಗ್ಯ, ಕ್ಷೇಮ ಸಮಾಚಾರವನ್ನು ಕೇಳುತ್ತಿದ್ದಳು. ಅನೇಕ ವೈಚಾರಿಕ ಭಿನ್ನತೆಗಳಿದ್ದಾಗ್ಯೂ ಅಮ್ಮ ನನಗೆ ಮಹತ್ವದ ತಾಯಿಯಾಗಿದ್ದರು; ನಾನು ಅವರ ಏಕಮಾತ್ರ ಆಧಾರವಾಗಿದ್ದೆ, ಅವರು ತಮ್ಮ ವೃದ್ಧಾಪ್ಯವನ್ನು ಈ ಆಧಾರದಲ್ಲಿಯೇ ಕಳೆಯಲು ಬಯಸುತ್ತಿದ್ದರು. ಅಪ್ಪ ಅಮ್ಮನ ಬಗ್ಗೆ ವಿಚಾರಿಸಲಿಲ್ಲ, ನನ್ನ ಬಗ್ಗೆ ಸಹ ವಿಚಾರಿಸಲಿಲ್ಲ. ನನ್ನ ಬಗ್ಗೆ ಅಪ್ಪನಿಗೆ ಯಾರೂ ಹೇಳಲೇ ಇಲ್ಲ ಎಂದಲ್ಲ; ಇಲ್ಲಿಯ ವಿಷಯಗಳನ್ನು ಅಲ್ಲಿಗೆ ಮತ್ತು ಅಲ್ಲಿಯ ವಿಷಯಗಳನ್ನು ಇಲ್ಲಿ ಹೇಳುವವರು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹೋಗುತ್ತಾರೆ. ಅಪ್ಪನಿಗೂ ವಿಷಯ ಖಂಡಿತ ತಿಳಿದಿರಬೇಕು. ಆದರೆ ಅವರು ನನ್ನ ಬಾಲ್ಯದಿಂದಲೇ ನನ್ನ ಬಗ್ಗೆ ಯೋಚಿಸಿರಲಿಲ್ಲ, ಈಗೇಕೆ ಯೋಚಿಸುತ್ತಾರೆ?

ಅಮ್ಮ ನನ್ನ ಬಗ್ಗೆ ಯೋಚಿಸುತ್ತಿದ್ದರು. ನನ್ನ ಬಗ್ಗೆ ಅವರ ದೃಷ್ಟಿಕೋನ ಸದಾ ಒಂದೇ ತೆರನಾಗಿತ್ತು. ಅವರ ದೃಷ್ಟಿಯಲ್ಲಿ ನಾನು ಒಮ್ಮೆ ಮಗುವಾದರೆ, ಇನ್ನೊಮ್ಮೆ ದೊಡ್ಡವಳಾಗುತ್ತಿದ್ದೆ. ನಾನು ಅಮ್ಮನಿಗೆ ನನ್ನ ಕರವಾಚೌಥ್ ಆಚರಿಸಿದ ಬಗ್ಗೆ ಹೇಳಿದೆ. ಅವರ ಧ್ವನಿಯಿಂದಲೇ, ಅವರು ತಮ್ಮ ಹಣೆಯನ್ನು ಚಚ್ಚಿಕೊಂಡರು ಎಂದು ಅನ್ನಿಸಿತು.

'ಸುಗಂಧಾ, ಇದೇನು ಮಾಡ್ತಿದ್ದೀಯ? ನೀನು ಹೋಗುತ್ತಿರುವ ದಿಕ್ಕಿನಲ್ಲೇ ಹೋಗು. ಹೀಗೆ ನೀನು ಅಲೆಯಲು ಆರಂಭಿಸಿದರೆ, ಮುಂದೊಂದು ದಿನ ನೀನು ಮರುಭೂಮಿಯಲ್ಲಿ ನಿಲ್ಲಬೇಕಾಗುತ್ತದೆ. ಆಗ ನಿನ್ನ ಅಕ್ಕಪಕ್ಕ ಯಾರೂ ಇರುವುದಿಲ್ಲ'. ಅಮ್ಮ ನನಗೆ ಗಂಭೀರವಾಗಿ ತಿಳಿವಳಿಕೆ ಹೇಳಿದ್ದರು.

'ನೀನೀಗ ಅವಿವಾಹಿತೆಯಾಗಿ 'ಲಿವ್ ಇನ್ ರಿಲೇಶನ್'ನಲ್ಲಿರುತ್ತಾ ಜೀವನವನ್ನು ಸಾಗಿಸಲು ನಿಶ್ಚಯಿಸಿದ್ದೀಯ, ಇಷ್ಟು ದಿನಗಳಿಂದ ಅದನ್ನು ದೃಢತೆಯಿಂದ ಪಾಲಿಸುತ್ತಿದ್ದೀಯ. ಈಗ ಅದನ್ನು ಬಿಡಬೇಡ, ಸುಗಂಧಾ! ನೀನು ಹೀಗೆಯೇ ನಿನ್ನ ಜೀವನವನ್ನು ಕಳೆಯಬೇಕಿದೆ. ಹೆಣ್ಣು, ಪುರುಷನ ಆಸರೆಯಿಂದಲ್ಲ, ತನ್ನ ದೃಢತೆಯಿಂದ ಜೀವನವನ್ನು ಎದುರಿಸಬಲ್ಲಳು, ಈ ನನ್ನ ಮಾತನ್ನು ಸದಾ ನೆನಪಿಟ್ಟುಕೋ. ಒಂದು ವೇಳೆ ನಿನಗಿದೆಲ್ಲವೂ ಇಷ್ಟವಾದರೆ ಮದುವೆ ಮಾಡಿಕೋ... ನನ್ನ ಮುದ್ದು ಚಿನ್ನ! ನೀನೇಕೆ ಮದುವೆ ಮಾಡಿಕೊಳ್ಳಬಾರದು?'



'ಇಲ್ಲಮ್ಮ, ನನಗೆ ಇಂಥ ಯಾವ ಯೋಚನೆಯೂ ಇಲ್ಲ. ಅದು ಸುಮ್ಮನೆ ಎಂಜಾಯ್ ಮಾಡುವುದಕ್ಕಾಗಿ...' ನಾನು ರಿತಿಕ್ ಹೇಳಿದ ಫಿಲಾಸಫಿಯನ್ನೇ ಅಮ್ಮನಿಗೆ ಹೇಳಿದೆ. ಆದರೆ ನಂತರ ನನಗೆ ನನ್ನ ಮಾತಿನಲ್ಲಿ ಪೊಳ್ಳುತನವಿದೆ, ನನಗೆ ನಾನೇ ಸುಳ್ಳು ಹೇಳಿಕೊಳ್ಳುತ್ತಿದ್ದೇನೆ, ಎಂಜಾಯ್ ಎಂದು ಹೇಳಿ ನನ್ನನ್ನು ನಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದೇನೆ ಎಂದು ಅನ್ನಿಸಿತು. ಬಹುಶಃ ಅಮ್ಮ ಸರಿಯಾಗಿಯೇ ಹೇಳುತ್ತಿದ್ದಾರೆ. ನಾನು ಆತ್ಮಾವಲೋಕನ ಮಾಡಿಕೊಳ್ಳಬೇಕು, ಕಡೆಗೆ ನಾನು ಬಯಸುವುದಾದರೂ ಏನನ್ನು? ಪರಸ್ಪರ ಒಪ್ಪಂದ ಮಾಡಿಕೊಂಡು 'ಲಿವ್ ಇನ್ ರಿಲೇಶನ್'ನಲ್ಲಿರುವುದೋ ಅಥವಾ ವಿಧಿವತ್ತಾಗಿ ಮದುವೆ ಮಾಡಿಕೊಂಡು ವಿವಾಹಿತೆಯಾಗಿರುವುದೋ? ನನ್ನ ಮನಸ್ಸು ನನಗೆ ಉತ್ತರಿಸಿತು. ಅದೇನೆಂದರೆ, ನನಗೇನಾದರು ಅಪೇಕ್ಷೆ ಇದ್ದರೆ, ಅದು ಜೀವಮಾನವಿಡೀ ರಿತಿಕ್‌ನೊಂದಿಗಿರುವುದು.

ನಾನು ಈ ಐದು ವರ್ಷಗಳ ಅವಧಿಯಲ್ಲಿ ರಿತಿಕ್‌ನ ಸ್ವಭಾವದಲ್ಲಾಗುವ ಪರಿವರ್ತನೆಗಳನ್ನು ಮನಗಂಡಿದ್ದೆ. ಈಗ ಅವನು ನನ್ನನ್ನು ಗದರಿಸುತ್ತಿದ್ದ, ಪರಂಪರಾಗತ ಪತಿಯಂತೆ ನಿಂದಿಸುತ್ತಲೂ ಇದ್ದ. ಈಚೆಗೆ ಕೆಲವು ದಿನಗಳಿಂದ ನಾನು, ನಮ್ಮ 'ಅಸಾಮಾಜಿಕ' ಸಂಬಂಧ 'ಸಾಮಾಜಿಕ' ಆಕಾರವನ್ನು ಪಡೆಯುತ್ತಿದೆ ಎಂಬುದನ್ನು ಮನಗಾಣುತ್ತಿದ್ದೆ. ಹೊಣೆಗಾರಿಕೆಯ ಬಗ್ಗೆ ರಿತಿಕ್‌ಗೆ ನನ್ನಿಂದ ಅಪೇಕ್ಷೆಗಳು ಹೆಚ್ಚುತ್ತಿದ್ದವು. ಅವನು ನನ್ನ ಮೇಲೆ ಹಕ್ಕು ಚಲಾಯಿಸುತ್ತಿದ್ದ. ಈಗ ಮೊದಲಿನಂತೆ ಹಾಸಿಗೆಯಲ್ಲಿ ಅವನ ಉತ್ಸಾಹ ಇರುತ್ತಿರಲಿಲ್ಲ. ಅವನಿಗೆ ಬೇಕೆನಿಸಿದಾಗ ನನ್ನನ್ನು ಮಲಗುವ ಕೋಣೆಗೆ ಎಳೆದೊಯ್ಯುತ್ತಿದ್ದ. 'ಹೇಗಿತ್ತು?' ಎಂದು ಕೇಳುವ ಅವಶ್ಯಕತೆಯೂ ಅವನಿಗಿರಲಿಲ್ಲ, ಆದರೆ ಈ ಹಿಂದೆ ಕೇಳುತ್ತಿದ್ದ.

ಕಳೆದ ತಿಂಗಳು ಹೊಸ ನೈಟ್‌ಗೌನ್ ಧರಿಸಿದ್ದೆ. ರಿತಿಕ್ ಈ ಬಗ್ಗೆ ಗಮನವನ್ನೇ ಕೊಡಲಿಲ್ಲ, ಆದರೆ ಮೊದಲು ಹೀಗೆ ಮಾಡುತ್ತಿರಲಿಲ್ಲ. ಅವನಿಗೆ ತನ್ನ ದೈಹಿಕ ಅಗತ್ಯಗಳನ್ನು ಈಡೇರಿಸಿಕೊಳ್ಳುವ ಶೀಘ್ರತೆಯಿರುತ್ತಿತ್ತು. ರಿತಿಕ್ ನನ್ನ ಹೊಸ ನೈಟ್ ಗೌನ್ ಬಗ್ಗೆ ಗಮನವನ್ನೂ ಕೊಡಲಿಲ್ಲ, ಅದರ ಮಖಮಲ್ಲಿನ ಸ್ಪರ್ಶವನ್ನೂ ಅನುಭವಿಸಲಿಲ್ಲ. ರಿತಿಕ್ ಅದನ್ನು ಬದಿಗೆ ಸರಿಸಿ, ಮಾಡಬೇಕಾದುದ್ದನ್ನು ಮಾಡಿ ಮುಗಿಸಿ ಒಂದು ಕಡೆಗೆ ಹೊರಳಿದ. ಅವನು ಮುಖ ಆಚೆ ಮಾಡಿ ಮಲಗಿದ್ದ. ನಾನು ತುಂಬಾ ಹೊತ್ತು ಬಿಕ್ಕಳಿಸುತ್ತಿದ್ದೆ. ಈ ಹಿಂದೆ ಗೌನಿನ ಒಂದೊಂದು ಬಟನ್ ತೆರೆಯುತ್ತಾ ನನ್ನ ಮೇಲೆ ಪ್ರಶಂಸೆಯ ಹೂಮಳೆಗರೆಯುತ್ತಿದ್ದ ರಿತಿಕ್ ಇವನೆಯೇ? ದೇಹದ ಸಮುದ್ರದಲ್ಲಿ ಮುಳುಗೇಳುತ್ತಾ, ನೀನು ಅದ್ಭುತವೆಂದು ನನ್ನ ಕಿವಿಯಲ್ಲಿ ಪಿಸುಗುಟ್ಟುತ್ತಿದ್ದ ರಿತಿಕ್ ಇವನೆಯೇ? ನಾವು ಯಾವ ಹೊಸತನವನ್ನು ಕಾಯ್ದಿಟ್ಟುಕೊಳ್ಳಲೋಸುಗ ವಿವಾಹವಾಗದೆ ಜೊತೆಯಲ್ಲಿರುವ ತೀರ್ಮಾನವನ್ನು ಕೈಗೊಂಡಿದ್ದೆವೋ, ಆ ಹೊಸತನ ಹಿಂದಕ್ಕೆ ಸರಿಯುತ್ತಿದೆ ಎಂಬ ಅನುಭವ ನನಗಾಗುತ್ತಿತ್ತು. ನಾವು ವಿವಾಹಿತರಲ್ಲ, ಆ ಹೊಸತನವನ್ನು ಬೇರೆ ವ್ಯಕ್ತಿಗಳಲ್ಲಿ ಹುಡುಕಲು ನಾವು ಸ್ವತಂತ್ರರು. ಆದರೆ ನನ್ನ ಹೆಣ್ಣುಮನಸ್ಸು ರಿತಿಕ್‌ನಿಂದ ಬೇರೆಯಾಗಿ, ಬೇರೊಂದು ದೇಹದಲ್ಲಿ ಶಾಂತಿಯನ್ನು ಅರಸದು ಎಂಬುದರ ಅರಿವು ನನಗಿತ್ತು. ಸಂಬಂಧಗಳ ಅಲೆಮಾರಿ ಜೀವನ ಹೆಣ್ಣು ದೇಹಕ್ಕೆ ಹೊಸ ಅನುಭವಗಳನ್ನು ಕೊಟ್ಟರೂ, ಹೆಣ್ಣುಮನಸ್ಸಿಗೆ ಶಾಂತಿಯನ್ನು ಕೊಡಲಾರದು.

ನಾವಿಬ್ಬರು ಯಾವ ವಿಧದ ಜೀವನವನ್ನು ಸಾಗಿಸುತ್ತಿದ್ದೇವೆಯೋ, ಅದು ಪ್ರಯೋಗಶಾಲೆಯಲ್ಲಿ ಮಾಡಲಾಗುತ್ತಿದ್ದ ಒಂದು ಪ್ರಯೋಗವಾಗಿರಲಿಲ್ಲ. ನಾವು ನಮ್ಮ ಈ ಜೀವನವನ್ನು ನಮ್ಮದೇ ಆದ ರೀತಿಯಲ್ಲಿ ಸಾಗಿಸಲು ತೀರ್ಮಾನಿಸಿದ್ದೆವೆ. ಆದರೆ ನಾವು ವಾಸ್ತವವಾಗಿಯೂ, ನಮ್ಮದೇ ಆದ ವಿಧಾನದಲ್ಲಿ ನಮ್ಮ ಜೀವನವನ್ನು ಸಾಗಿಸುತ್ತಿರುವೆವೇ? ನಾನು ನನ್ನ ಮಿತ್ರರೊಂದಿಗೆ ಸ್ವತಂತ್ರವಾಗಿ ಇರಲು ಸಾಧ್ಯವಿಲ್ಲ, ರಿತಿಕ್ ನನ್ನ ಆ ಮಿತ್ರರ ಬಗ್ಗೆ ವ್ಯಂಗ್ಯದ ಮಾತುಗಳನ್ನು ಹೇಳಿ ನನ್ನ ಹೃದಯವನ್ನು ಆಗಾಗ ಜರಡಿ ಮಾಡುತ್ತಿರುತ್ತಾನೆ. ಮನುಷ್ಯನ ಜೀವನ ಒಂದು ಬಾರಿ ಸಿಗುತ್ತದೆ, ಅದನ್ನು ನಮ್ಮ ಇಚ್ಛೆಯಂತೆ ಸಾಗಿಸಬೇಕು, ತನಗಿಷ್ಟವಾದವರನ್ನು ಪ್ರೀತಿಸಬೇಕು, ತನಗಿಷ್ಟವಾದವರೊಂದಿಗೆ ಇರಬೇಕು, ತನಗಿಷ್ಟವಾದವರೊಂದಿಗೆ ಮಲಗಬೇಕು ಎಂದು ರಿತಿಕ್ ಈ ಮೊದಲು ಹೇಳುತ್ತಿದ್ದ. ಆದರೆ ಈಗ ಅವನ ಫಿಲಾಸಫಿ ಅವನಿಗಷ್ಟೇ ಸೀಮಿತವಾಗಿದೆ. ಇದಕ್ಕೆ ಪ್ರತಿಕೂಲವಾಗಿ ನಾನು ಅವನನ್ನು